4

# ಮಿಮಿ ಖಾಯಿಲೆ ಬಿದ್ದಳು





ಒಂದು ದಿನ ಮಿಮಿ ಖಾಯಿಲೆ ಬಿದ್ದಳು.ಅವಳಿಗೆ ತಂಡಿ ಮತ್ತು ಕೆಮ್ಮು ಆಗಿತ್ತು.ಅವಳು ಮಲಗಿಯೇ ಇರಬೇಕೆಂದು ಮಿಸೆಸ್ ಕರಡಿ/ಬೇರ್ ಹೇಳಿದಳು.
ಉಲ್ಲಾಸ/ನಗುಮುಖದ ಮಿಸ್ಟರ್. ಲಯನ್/ಸಿಂಹ ಅವಳನ್ನು ನೋಡಲು ಬಂದರು. ಮಿಮಿಗೆ ಡಾ.ಸಿಂಹ/ಲಯನ್ ಎಂದರೆ ಭಯ ಹಾಗೂ ಅವಳು ಅಳಲು ಪ್ರಾರಂಭಿಸಿದಳು, ಏಕೆಂದರೆ ಅವರು ಅವಳಿಗೆ ಇಂಜೆಕ್ಷನ್ ಕೊಡುವುದು ಅವಳಿಗೆ ಇಷ್ಟವಿರಲಿಲ್ಲ.
ಆದರೆ ಮಿಸ್ಟರ್ ಸಿಂಹ/ ಲಯನ್ ತುಂಬಾ ದಯಾಳುವಾಗಿದ್ದರು ಮತ್ತು ಅವಳ ಉಷ್ಣಾಂಶ ಪರೀಕ್ಷಿಸಿದ ಅವರು ಮಿಮಿಗೆ ಇನ್ನೂ ಕೆಲವು ದಿನ ಮಲಗಿಕೊಂಡಿದ್ದು ವಿಶ್ರಾಂತಿ ಪಡೆಯಲು ತಿಳಿಸಿದರು.
ಹಾಗಾಗಿ, ಮಿಮಿಗೆ ಶಾಲಾಕೊಠಡಿಗೆ ಹೋಗಲೂ ಅನುಮತಿ ಇರಲಿಲ್ಲ.



ಮಿಮಿಗೆ ತಾನು ಒಂಟಿ ಎಂದು ಎಣಿಸಿ ದುಃಖವಾಯಿತು.ಅವಳ ತಲೆ ನೋಯುತ್ತಿತ್ತು ಹಾಗೂ ಅವಳಿಗೆ ಅಮ್ಮ ಹತ್ತಿರ ಬೇಕಿತ್ತು. ಆಗಲೇ ಮಿಸೆಸ್ ಬೇರ್ ಒಳಗೆ ಬಂದು ಅವಳು ಅಳುವುದನ್ನು ನೋಡಿದಳು. "ಮಿಮಿ, ಏನಾಯಿತು?"ಎಂದು ಮಿಸೆಸ್ ಕರಡಿ ಕೇಳಿದಳು.

"ನನಗೆ ನನ್ನ ಮಮ್ಮಿ ಬೇಕು...ನಾನು ಅವಳನ್ನು ತುಂಬಾ ಜ್ಞಾಪಿಸಿಕೊಳ್ಳುತ್ತೇನೆ." ಎಂದು ಮಿಮಿ ಅತ್ತಳು.

"ನೀನು ಅಮ್ಮನನ್ನು ನೆನಪಿಸಿಕೊಳ್ಳುತ್ತಿದ್ದೀನೆ ನನಗೆ ಗೊತ್ತು. ಮಿಮಿ..ಇಲ್ಲಿರುವ ಎಲ್ಲಾ ಚಿಕ್ಕ ಪ್ರಾಣಿಗಳಿಗೂ ನಿನ್ನಂತೆಯೇ ಅಮ್ಮ ಹಾಗೂ ಅಪ್ಪ ಇಲ್ಲಾ, ಅವರೂ ಅವರನ್ನು ಜ್ಞಾಪಿಸಿಕೊಳ್ಳುತ್ತಾರೆ. ಹಾಗಾಗಿ, ಕೆಲವೊಮ್ಮೆ ನಿನ್ನ ಅಮ್ಮನನ್ನು ಜ್ಞಾಪಿಸಿಕೊಳ್ಳುವುದೂ...ದುಃಖವಾಗುವುದೂ ಸಹಜ. ನಾನು ನಿಮ್ಮ ಆರೈಕೆ ಮಾಡಲು ಇಲ್ಲಿದ್ದೇನಲ್ಲಾ...ಹಾಗೂ ಮಿಸೆಸ್. ಜಿಂಕೆ/ಡೀರ್ ಹಾಗೂ ಮಿಸ್ಟರ್ ಸಿಂಹ/ ಲಯನ್ ಸಹಾ ಇಲ್ಲಿ ನಿಮ್ಮನ್ನು ನೋಡಿಕೊಳ್ಳಲು ಇದ್ದಾರೆ."




"ಏಕೆ ನನ್ನನ್ನು ನನ್ನ  ಅಪ್ಪಮಾರುಕಟ್ಟೆ ಸ್ಥಳದಲ್ಲಿ ಬಿಟ್ಟು ಹೋದರು? ಅವರು ಯಾಕೆ ಹಿಂದಿರುಗಿ ಬರಲಿಲ್ಲ?"
"ಅವರು ಯಾಕೆ ಹಾಗೆ ಮಾಡಿದರೆಂದು ನನಗೆ ನಿಜವಾಗಿ ಗೊತ್ತಿಲ್ಲ. ಆ ದಿನ ಏನಾಗಿತ್ತು ಮತ್ತು ಅವರು ಏಕೆ ಹಿಂದಿರುಗಿ ಬರಲಿಲ್ಲ ಎಂದು ತಿಳಿದುಕೊಳ್ಳಲು ನಾವು ಅವರನ್ನು ಕೇಳಬೇಕಾಗುತ್ತದೆ.ಆದರೆ ಅವರು ನಿನ್ನನ್ನು ಹಾಗೇ ಸುಮ್ಮನೆ ಮಾರುಕಟ್ಟೆಯಲ್ಲಿ ಬಿಟ್ಟುಬಿಟ್ಟರೆಂದು ನನಗೆ ಅನ್ನಿಸುವುದಿಲ್ಲ...ನೀನು ಎಷ್ಟು ಹೆದರಿದ್ದೀ ಹಾಗೂ ದುಃಖಿಯಾಗಿದ್ದೀ ಎಂದು ನನಗೆ ತಿಳಿದಿದೆ."ಎಂದು ಮಿಸೆಸ್ ಕರಡಿ/ಬೇರ್ ಹೇಳಿದಳು.
ಮಿಮಿ ಕೇಳಿದಳು, "ಅಪ್ಪ ನನ್ನನು ಪ್ರೀತಿಸುವುದಿಲ್ಲವಾ?....ಹಾಗಾದರೆ ಅವರು ನನ್ನನ್ನು ಹುಡುಕಿ ಯಾಕೆ ಬಂದಿಲ್ಲ?"
"ನಿನ್ನ ಅಪ್ಪ ನಿನ್ನನ್ನು ಪ್ರೀತಿಸುತ್ತಾರೆಂದು ನಾನು ಭಾವಿಸುತ್ತೇನೆ,,,ಏಕೆಂದರೆ ಎಲ್ಲಾ ಅಪ್ಪಂದಿರು ತಮ್ಮ ಮಕ್ಕಳನ್ನು ಪ್ರೀತಿಸುತ್ತಾರೆ. ಆದರೆ ನಮಗೆ ಗೊತ್ತಿಲ್ಲದಿರುವ ಯಾವುದೋ ಕಾರಣಕ್ಕಾಗಿ ನಿನ್ನ ಅಪ್ಪನಿಗೆ ನಿನ್ನನ್ನು ಹುಡುಕಿಕೊಂಡು ಬರಲು ಸಾಧ್ಯವಾಗುತ್ತಿಲ್ಲವೇನೋ.ಅವರಿಗೆ ತಮ್ಮದೇ ಆದ ಕೆಲವು ಸಮಸ್ಯೆಗಳು ಹಾಗೂ ತೊಂದರೆಗಳು ಇರಬಹುದು." ಎಂದು ಮಿಸೆಸ್ ಕರಡಿ/ಬೇರ್ ವಿವರಿಸಿದಳು.
"ಅವರು ವಾಪಾಸು ಬರುತ್ತಾರಾ?" ಎಂದು ಮಿಮಿ ಕೇಳಿದಳು.
ಮಿಸೆಸ್ ಕರಡಿ/ಬೇರ್ ಹೇಳಿದಳು, "ಅವರು ಹಿಂದಿರುಗಿ ಬರುತ್ತಾರೋ ಎಂಬುದು ನನಗೆ ಗೊತ್ತಿಲ್ಲ. ಅವರು ಸಿಗಬಹುದೇನೋ ಎಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಅವರು ಸಿಕ್ಕರೆ ಹಾಗೂ ಅವರು ನಿನ್ನನ್ನು ಕರೆದುಕೊಂಡು ಹೋಗಲು ಬಂದರೆ, ನಿನಗೆ ಅವರೊಡನೆ ಇರಲು ಮನಸ್ಸಿದ್ದರೆ, ನೀನು ದಾರಾಳವಾಗಿ ಅವರೊಡನೆ ನಿನ್ನ ಮನೆಗೆ ಹೋಗಬಹುದು.ಆದರೆ ಅವರು ನಮಗೆ ಸಿಗದಿದ್ದರೆ, ನೀನು ನಮ್ಮೊಡನೆ ಇಲ್ಲೇ ಇರಬಹುದು...ಶಾಲೆಗೆ ಹೋಗಬಹುದು, ಸ್ನೇಹಿತರೊಂದಿಗೆ ಇರಬಹುದು, ನೀನು ನಮ್ಮೊಡನೆ ಇಲ್ಲಿ ಇರುವುದು ನಮಗೆ ಇಷ್ಟವೆಂದು ನಿನಗೆ ಗೊತ್ತಿದೆ."




ಆಗ ಟಿಂಗು ಒಂದು ಬಣ್ಣ ಹಚ್ಚುವ ಪುಸ್ತಕ ಹಾಗೂ ಕ್ರೆಯಾನ್ಗಳನ್ನು ತೆಗೆದುಕೊಂಡು ಬಂದಳು. "ನಾವು ಬಣ್ಣ ಹಚ್ಚೋಣ!", ಅವಳು ಹೇಳಿದಳು. "ಅದು ನಿನಗೆ ಸಂತೋಷ ಕೊಡುತ್ತದೆ ಎಂದು ನನಗೆ ಗೊತ್ತು!" ಎಂದಳು.





ಕಿಕಿ ಮಿಮಿಗೆ ಒಂದು ದೊಡ್ಡ ಲಾಲಿಪಾಪ್ ತಂದನು.
"ನನ್ಗೆ ಲಾಲಿಪಾಪ್‌ಗಳೇ ಔಷಧಿಗಳಿಗಿಂತ ಬೇಗ ಗುಣಮುಖರಾಗಲು ಸಹಾಯ ಮಾಡುತ್ತವೆ" ಎಂದು ಅವನು ಹೇಳಿದ. "ಮತ್ತೆ ಲಾಲಿಪಾಪ್‌ಗಳೇಔಷಧಿಗಳಿಗಿಂತ ರುಚಿಕರವಾಗಿರುತ್ತವೆ, ಅಲ್ಲವೇ?"
ಮಿಮಿ ಖಂಡಿತವಾಗಿಯೂ ಇದನ್ನು ಒಪ್ಪಿದಳು!



ಮಿಮಿಗೆ ಆರಾಮವಾಗಲಿ ಎಂದು ಬೋಬೋ ಮಿಮಿಯ ಕೈಯನ್ನು ಹಿಡಿದುಕೊಂಡ. "ನಿನ್ನನ್ನು ಬೆಚ್ಚಗಿಡಲು...ನಾನು ನಿನ್ನ ಕಾಲ ಮೇಲೆ ಕುಳಿತುಕೊಳ್ಳುತ್ತೇನೆ", ಎಂದು ಶೇರೂ ಹೇಳಿದ.






"ಶಾಲೆಯಲ್ಲಿ ನೀನಿಲ್ಲದೆ ಮಜಾ ಬರುವುದಿಲ್ಲ ಮಿಮಿ", ಎಂದು ನಾನೂ ಮತ್ತು ಮೋಮೋ ಹೇಳಿದರು. "ಬೇಗ ಗುಣ ಹೊಂದು!" "ನಾನು ಅಡುಗೆ ಮನೆಯಲ್ಲಿ ನಿನ್ನನ್ನು ನೆನಪಿಸಿಕೊಳ್ಳುತ್ತಿರುತ್ತೇನೆ, ಮಿಮಿ!ನಿನ್ನಷ್ಟು ಚೆನ್ನಾಗಿ ಯಾರೂ ಪ್ಲೇಟ್ಗಳನ್ನು ಜೋಡಿಸುವುದಿಲ್ಲ!"ಎಂದು ಮಿಸೆಸ್ ಜಿಂಕೆ/ಕರಡಿ ಹೇಳಿದಳು.




"ನೀನು ನೋಡಿದ್ದೀಯಲ್ಲಾ ಮಿಮಿ ಈಗ, ಎಲ್ಲರೂ ನಿನ್ನನ್ನು ಪ್ರೀತಿಸುತ್ತಾರೆ...ನಿನಗೆ ಇಲ್ಲಿ ತುಂಬಾ ಹೊಸ ಸ್ನೇಹಿತರಿದ್ದಾರೆ.ಅವರೆಲ್ಲರೂ ನೀನು ಬೇಗ ಗುಣಮುಖಳಾಗಿ ಮತ್ತೆ ಅವರೊಂದಿಗೆ ಹೊರಗೆ ಆಡಲು ಬರುತ್ತೀಯೆಂದು ಆಸೆ ಪಡುತ್ತಿದ್ದಾರೆ," ಎಂದು ಮಿಸೆಸ್ ಕರಡಿ/ಬೇರ್ ಹೇಳಿದಳು.

"ಹೌದು, ನಾನು ಅವರೆಲ್ಲರನ್ನೂ ಪ್ರೀತಿಸುತ್ತೇನೆ....ನನಗೆ ಈಗಾಗಲೇ ಆರಾಮವಾಗುತ್ತಿದೆ," ಎಂದು ಮಿಮಿ ನಗುತ್ತಾ ಹೇಳಿದಳು.

ಸಮುದಾಯ ಮಕ್ಕಳ ಮತ್ತು ಹದಿಹರೆಯದವರ ಮಾನಸಿಕ ಆರೋಗ್ಯ ಸೇವೆಗಳ
ಯೋಜನೆ,
ಮಕ್ಕಳ ಮತ್ತು ಹದಿಹರೆಯದವರ ಮನೋವೈದ್ಯಶಾಸ್ತ್ರ ಇಲಾಖೆ,
ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ರಾಷ್ಟ್ರೀಯ ಸಂಸ್ಥೆ (ನಿಮ್ಹಾನ್ಸ್)
(ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ)
ಹೊಸೂರು ರಸ್ತೆ, ಬೆಂಗಳೂರು-560029
**Website:www.nimhans.ac.in**
**Email :capnimhans@gmail.com**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದ ನೆರವಿನೊಂದಿಗೆ

ವಿನ್ಯಾಸ ಮತ್ತು ಕಲೆ: ಸತೀಶ್ ರಾಮ್